## ಇಂಗ್ಲೆಂಡ್ ಮೂಲದ ತಂತಜ್ಞಾನ

ತಾಯಿಯ ಗರ್ಭದೊಳಗೆ ಬೆಚ್ಚಗಿನ ವಾತಾವರಣದಲ್ಲಿ ಬೆಳೆದ ಮಗು ಬಾಹ್ಯಜಗತ್ತಿಗೆ ಕಾಲಿಟ್ಟ ಕೂಡಲೇ ಜೋರಾಗಿ ಅಳುತ್ತದೆ. ಒಂದು ವೇಳೆ ಮಗು ಅತ್ತಿಲ್ಲ ಎಂದರೆ ಸಮಸ್ಯೆ ಎಂದೇ ಅರ್ಥ. ಕೆಲವು ಮಕ್ಕಳು ಹುಟ್ಟುವಾಗ ರಕ್ತ ಮತ್ತು ಆಮ್ಲಜನಕ ಮೆದುಳಿಗೆ ಸರಬರಾಜು ಆಗದೆ ತೊಂದರೆ ಅನುಭವಿಸುತ್ತವೆ. ಇಂಥ ಮಕ್ಕಳ ಚಿಕಿತ್ಸೆಗಾಗಿಯೇ ವೈದ್ಯಲೋಕದಲ್ಲಿ ಹೊಸದಾಗಿ 'ಟೋಟಲ್ ಬಾಡಿ ಕೂಲಿಂಗ್' ತಂತ್ರಜ್ಞಾನ ಬಂದಿದೆ.
ಇದು ಇಂಗ್ಲೆಂಡ್ ಮೂಲದ ತಂತ್ರಜ್ಞಾನವಾಗಿದ್ದು, ಕರ್ನಾಟಕದಲ್ಲಿ ಕೇವಲ 4–5 ಆಸ್ಪತ್ರೆಗಳಲ್ಲಿ ಈ ವ್ಯವಸ್ಥೆ ಇದೆ. ಮದರ್‌ಹುಡ್ ಆಸ್ಪತ್ರೆಯಲ್ಲಿ ಈ ಅತ್ಯಾಧುನಿಕ ತಂತ್ರಜ್ಞಾನದ ಬಳಕೆಯಿದ್ದು, ಅವಧಿಪೂರ್ವ ಜನಿಸಿದ ಮಕ್ಕಳಿಗೆ ವರದಾನವಾಗಿದೆ.

ಈ ತಂತ್ರಜ್ಞಾನವನ್ನು ಬಳಸಿ ಅವಧಿಪೂರ್ವ ಮಕ್ಕಳಿಗೆ ಸಂಪೂರ್ಣ ಸುರಕ್ಷೆ ಒದಗಿಸಲಾಗುತ್ತಿದೆ. ಇದರಿಂದ ಪ್ರಿಮೆಚ್ಯೂರ್ ಮಕ್ಕಳಿಗೆ ಅನುಕೂಲವಾಗಿದೆ. ಜೊತೆಗೆ ಅನಿಮಿಯಾ ಸಮಸ್ಯೆಯನ್ನೂ ನಿಯಂತ್ರಿಸಬಹುದು. ತೀವ್ರ ತೊಂದರೆ ಇರುವ ಮಕ್ಕಳಿಗೆ ಸಹ ಈ ತಂತ್ರಜ್ಞಾನ ಸೂಕ್ತವಾಗಿದೆ.


ಸೋಂಕು ಬಿಟ್ಟರೆ ನವಜಾತ ಶಿಶುಗಳ ಜೀವಕ್ಕೆ ಅಪಾಯಕ್ಕೆ ತಂದೊಡ್ಡುವುದು 'ಎಚ್‌ಐಇ' (Hypoxic Ischemic Encephalopathy) ಎಂದರೆ ಸ್ಥೂಲಾರ್ಥದಲ್ಲಿ 'ಉಸಿರುಗಟ್ಟುವಿಕೆ' ಎಂಬುದು. ಇದನ್ನು ತಡೆಯಲು ಟೋಟಲ್ ಬಾಡಿ ಕೂಲಿಂಗ್' ತಂತ್ರಜ್ಞಾನ ಅತ್ಯಂತ ಪರಿಣಾಮಕಾರಿ.

ಬಾಡಿ ಕೂಲಿಂಗ್ ಯಂತ್ರ ಮುಂದುವರಿದ ದೇಶಗಳಲ್ಲಷ್ಟೇ ಇತ್ತು. ಕಳೆದ ಐದಾರು ವರ್ಷಗಳ ಹಿಂದೆ ಭಾರತಕ್ಕೆ ಬಂದಿದೆ. ಇದು ಬಹಳ ದುಬಾರಿಯಾಗಿದ್ದು ದಿನಕ್ಕೆ 25ರಿಂದ 30 ಸಾವಿರ ರೂಪಾಯಿ ವೆಚ್ಚ ತಗಲುತ್ತದೆ.

ತಜ್ಞ ಡಾ. ಪ್ರತಾಪಚಂದ್ರ ಅವರು ಈ ಮಗುವಿನ ವೈದ್ಯಕೀಯ ಸ್ಥಿತಿಗತಿಯನ್ನು ವಿವರಿಸುವುದು ಹೀಗೆ...

'ಇದು ಅತ್ಯಂತ ಸವಾಲಿನ ಪ್ರಕರಣಗಳಲ್ಲಿ ಒಂದಾಗಿತ್ತು ಮತ್ತು ಮಗುವಿನ ಜೀವವನ್ನು ಉಳಿಸುವುದು ನಮ್ಮ ಏಕೈಕ ಆದ್ಯತೆಯಾಗಿತ್ತು. ಮಗುವಿನ ಹೃದಯ ರಚನೆ ಸರಿಯಾಗಿಯೇ ಇತ್ತು. ಆದರೆ ಮಗುವಿಗೆ ಸುಪ್ರಾ ವೆಂಟ್ರಿಕ್ಯುಲರ್ ಟಾಕಿಕಾರ್ಡಿಯಾ (SVT) ಎಂಬ ತೊಂದರೆ ಇರುವುದು ಖಚಿತವಾಯಿತು. ಎಸ್‌ವಿಟಿ ಎಂದರೆ ಮಗುವಿನ ಹೃದಯ ಬಡಿತ ಅತ್ಯಂತ ಅಸಹಜವಾಗಿರುವ ಕ್ರಿಯೆ.

ನವಜಾತ ಶಿಶುಗಳಲ್ಲಿ ಸಾಮಾನ್ಯವಾಗಿ ಹೃದಯಬಡಿತ ಪ್ರತಿ ನಿಮಿಷಕ್ಕೆ 120ರಿಂದ 160 ಇರುತ್ತದೆ. ಆದರೆ ಈ ಮಗುವಿಗೆ 230 ಇತ್ತು. ಅಡಿನೋಸಿನ್ ಔಷಧಿ ನೀಡಿದರೆ ಹೃದಯಬಡಿತ ಸಹಜ ಸ್ಥಿತಿಗೆ ಬರುತ್ತದೆ. ಆದರೆ ಹುಟ್ಟಿ ಎರಡು ದಿನವಾಗಿದ್ದ ಈ ಮಗುವಿಗೆ ಮೂರು ಬಾರಿ ನೀಡಿದರೂ ಫಲಕಾಣದೇ ಇದ್ದದ್ದು ವೈದ್ಯರನ್ನು ಕಳವಳಕ್ಕೀಡು ಮಾಡಿತ್ತು. ಬಳಿಕ ಎರಡು ಮೂರು ರೀತಿಯ ಔಷಧಿಗಳನ್ನು ನೀಡಿದರೂ ಮಗುವಿನ ಹೃದಯ ಬಡಿತದಲ್ಲಿ ಏನೂ ವ್ಯತ್ಯಾಸ ಕಾಣಲಿಲ್ಲ.



ಟೋಟಲ್ ಬಾಡಿ ಕೂಲಿಂಗ್ ತಂತ್ರಜ್ಞಾನದಿಂದ ಹೃದಯ ಬಡಿತ ಸುಗಮವಾದ ಮಗು, ತಾಯಿ ಸುಮಲತಾ ಬಾಯಿ ಅವರೊಂದಿಗೆ...



"ಅನಿಯಂತ್ರಿತ ಹೃದಯ ಬಡಿತ ಇದ್ದ ಯಾವುದೇ ಮಗುವಿಗೆ ಇದುವರೆಗೆ ಬಾಡಿ ಕೂಲಿಂಗ್ ತಂತ್ರಜ್ಞಾನದ ಪ್ರಯೋಗ ಮಾಡಿರಲಿಲ್ಲ. ಇದೇ ಮಗುವಿಗೆ ಮೊದಲ ಬಾರಿಗೆ ಮಾಡಿದ್ದು ಸಂಪೂರ್ಣ ಯಶಸ್ವಿಯಾಗಿದೆ.

**-ಡಾ. ಪ್ರತಾಪಚಂದ್ರ,**
ನವಜಾತ ಶಿಶು ತಜ್ಞರು, ಮದರ್‌ಹುಡ್ ಆಸ್ಪತ್ರೆ ಬೆಂಗಳೂರು

### ಜೀವ ಉಳಿಸಿದ ಟಿಬಿಸಿ

ಟೋಟಲ್ ಬಾಡಿ ಕೂಲಿಂಗ್ ಎಂಬುದೊಂದು ಅತ್ಯಾಧುನಿಕ ತಂತ್ರಜ್ಞಾನ. ಇದರಲ್ಲಿ ಚಿಕಿತ್ಸೆಯನ್ನು ಸಾಮಾನ್ಯವಾಗಿ ಸ್ಟ್ರೋಕ್ ಆದವರಿಗೆ, ಮೆದುಳಿಗೆ ಹಾನಿಯಾದವರಿಗೆ ನೀಡಲಾಗುತ್ತದೆ. ಮಗುವಿನ ಹೃದಯ ಬಡಿತ ಸರಿಪಡಿಸಲು ಈ ತಂತ್ರಜ್ಞಾನ ಬಳಸಿದ್ದು ದೇಶದಲ್ಲೇ ಇದೇ ಮೊದಲು.

ಅನಿಯಂತ್ರಿತ ಹೃದಯ ಬಡಿತ ಇದ್ದ ಯಾವುದೇ ಮಗುವಿಗೆ ಇದುವರೆಗೆ ಬಾಡಿ ಕೂಲಿಂಗ್ ತಂತ್ರಜ್ಞಾನದ ಪ್ರಯೋಗ ಮಾಡಿರಲಿಲ್ಲ. ಇದೇ ಮಗುವಿಗೆ ಮೊದಲ ಬಾರಿಗೆ ಮಾಡಿದ್ದು ಸಂಪೂರ್ಣ ಯಶಸ್ವಿಯಾಗಿದೆ. ಟೋಟಲ್ ಬಾಡಿ ಕೂಲಿಂಗ್ ತಂತ್ರಜ್ಞಾನ ಬಳಸಿದ ಮೇಲೆ ಮಗುವಿನ ಹೃದಯಬಡಿತ 230 ಇದ್ದದ್ದು ಕೇವಲ ಆರು ಗಂಟೆಗಳಲ್ಲೇ 130ಕ್ಕೆ ಬಂದು ಸಹಜ ಸ್ಥಿತಿಗೆ ಮರಳುತ್ತಿತ್ತು. ಇದಾಗಿ ಮೂರು ಬಾರಿ ಚಿಕಿತ್ಸೆ ನೀಡಲಾಯಿತು. ಮಗುವಿನ ಹೃದಯಬಡಿತ ಸಂಪೂರ್ಣ ನಾರ್ಮಲ್ ಆಯಿತು. ಈ ಇಡೀ ಪ್ರಕ್ರಿಯೆ ಪೂರ್ಣಗೊಳ್ಳಲು ಒಂದು ವಾರ ಕಾಲ ಬೇಕಾಯಿತು. ಈಗ ಮಗುವಿಗೆ ನಾಲ್ಕು ತಿಂಗಳುಗಳಾಗಿದ್ದು, ಆರೋಗ್ಯಪೂರ್ಣವಾಗಿದೆ.

### ಹೃದಯಬಡಿತದಲ್ಲಿ ಏರುಪೇರು ಏಕೆ?

ಸಾಮಾನ್ಯವಾಗಿ ಅನಿಯಮಿತ ಹೃದಯಬಡಿತಕ್ಕೆ ಕಾರಣ 'ಈಡಿಯೊಪಥಿಕ್' (Ediopathic) ಎನ್ನುತ್ತೇವೆ. ಕಾರಣ ಗೊತ್ತಿಲ್ಲದೇ ಇರುವುದು ಎಂದು ಇದರ ಅರ್ಥ.

ಕೆಲವೊಂದು ಪ್ರಕರಣಗಳಲ್ಲಿ ಮಗು ತಾಯಿಯ ಗರ್ಭದಲ್ಲಿದ್ದಾಗ ವೈರಾಣು ಸೋಂಕು ತಗಲಿರುವುದು, ಸೋಡಿಯಂ, ಪೊಟ್ಯಾಶಿಯಂ, ಕ್ಯಾಲ್ಸಿಯಂ, ಮೆಗ್ನೀಸಿಯಂ ಮುಂತಾದ ಎಲೆಕ್ಟ್ರೋಲೈಟ್ಸ್ ಕಡಿಮೆ ಆದಾಗ ಹೃದಯ ಬಡಿತದಲ್ಲಿ ಗಣನೀಯ ಏರುಪೇರು ಕಾಣಿಸಿಕೊಳ್ಳಬಹುದು. ■